# ಪ್ರತಿಕೂಲ ಹವಾಮಾನದಿಂದ ಗೋಧಿ ಉತ್ಪಾದನೆ ಹೆಚ್ಚಿನ ಪರಿಣಾಮವಿಲ್ಲ

ಪ್ರತಿಕೂಲ ಹವಾಮಾನದಿಂದ ಗೋಧಿ ಉತ್ಪಾದನೆ ಹೆಚ್ಚಿನ ಇಳಿಕೆಯಾಗಲಾರದೆನ್ನಲಾಗಿದೆ. ತಾಪಮಾನ ಸ್ವಲ್ಪ ಹೆಚ್ಚಳವಿದ್ದರೂ ಉತ್ಪಾದನೆ ಹೆಚ್ಚಿನ ಪ್ರಮಾಣದ ಇಳಿಕೆಯಾಗಲಾರದೆನ್ನಲಾಗಿದ್ದು 112 ಮಿಲಿಯನ್ ಟನ್ ಉತ್ಪಾದನೆಯಾಗುವ ನಿರೀಕ್ಷೆಯಿದೆಯೆನ್ನಲಾಗಿದೆ. ಈ ವರ್ಷ ಸರಕಾರಿ ಏಜೆನ್ಸಿಗಳು (FCI) 35 ಮಿಲಿಯನ್ ಟನ್ ಗೋಧಿ ಖರೀದಿಸಲಿದೆನ್ನಲಾಗಿದೆ. ಹೊಸ ಬೆಳೆಯ ಕಟಾವಿನ ಸಮಯ ಸಮೀಪವಾಗುತ್ತಿದ್ದಂತೆ ಗೋಧಿ ಹಾಗೂ ಅದರ ಉತ್ಪಾದನೆಗಳ ದರ ಇಳಿಕೆಯಾಗಲಾರಂಭಿಸಿದೆ. ಮುಂದೆ ದರಗಳು ಇಳಿಕೆಯಾಗುವ ಸಾಧ್ಯತೆಯಿದೆ. ಸರಕಾರ ದರದ ಮೇಲೆ ನೀಗಾವಹಿಸುತ್ತಿದೆಯೆನ್ನಲಾಗಿದೆ. ಸರಕಾರಿ ದಾಸ್ತಾನಿನಿಂದಲೂ ಗೋಧಿ ಮಾರುಕಟ್ಟೆಗೆ ಬಿಡುಗಡೆಗೊಳಿಸಿದೆಯೆನ್ನಲಾಗಿದೆ.